# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 743 |
| ಸದಸ್ಯರ ಹೆಸರು | : | ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 11.12.2023 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಸಚಿವರು |

****

| | ಪ್ರಶ್ನೆ | ಉತ್ತರ |
|---|---|---|
| (ಅ) | ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ಹಾಗೂ ಇತರೆ ವಿದ್ಯುತ್ ಕಂಪನಿಗಳಲ್ಲಿ ಸಕ್ರಮೀಕರಣಗೊಂಡಿರುವ ರೈತರ ನೀರಾವರಿ ಪಂಪ್‌ಸೆಟ್ ಗಳಿಗೆ ವಿದ್ಯುತ್ ಮೂಲ ಸೌಕರ್ಯಗಳಾದ ಕಂಬ ಕಂಡಕ್ಟರ್, ಪರಿವರ್ತಕ ಇತರೆಗಳನ್ನು ಅಳವಡಿಸಲು ಪೂರ್ಣ ಗುತ್ತಿಗೆ ಆಧಾರದಲ್ಲಿ ಟೆಂಡರ್ ಕರೆದು ಕಾರ್ಯಾದೇಶ ನೀಡಿದ್ದು, ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಬಡ್ಜೆಟ್ ನೀಡದಿರಲು ಕಾರಣಗಳೇನು ; | ಸರ್ಕಾರಿ ಆದೇಶ ಸಂಖ್ಯೆ: ಎನರ್ಜಿ/ವಿಎಸ್‌ಸಿ/214/2023, ಬೆಂಗಳೂರು, ದಿನಾಂಕ: 07.10.2023 ರನ್ವಯ, ವಿದ್ಯುತ್ ಸರಬರಾಜು ಕಂಪನಿಗಳು ಸಕ್ರಮಗೊಳಿಸಿದ ಕೃಷಿ ಪಂಪ್ ಸೆಟ್‌ಗಳಿಗೆ 2022-23 ಮತ್ತು 2023-24 ರಲ್ಲಿ ಟೆಂಡರ್ ಮೂಲಕ ಮೂಲ ಸೌಕರ್ಯಗಳನ್ನು ಕಲ್ಪಿಸುವ ಸಲುವಾಗಿ ಟೆಂಡರ್ ಕರೆಯಲಾದ ಅಂದಾಜು ಪಟ್ಟಿಯನ್ನು ಪುನರ್ ಪರಿಶೀಲಿಸಿ, ಪಂಪ್ ಸೆಟ್‌ಗಳು ಹಾಲಿ ಇರುವ ವಿದ್ಯುತ್ ಜಾಲದಿಂದ 500 ಮೀಟರ್‌ಯಿಂದಾಚೆ ಇದ್ದಲ್ಲಿ Stand alone/ off grid solar pump ಅಳವಡಿಸಲು ಸೂಚಿಸಿದ್ದು, 500 ಮೀಟರ್ ಒಳಗಿರುವ ಪಂಪ್ ಸೆಟ್‌ಗಳಿಗೆ ಕನಿಷ್ಟ ಅವಶ್ಯಕತೆಗೆ ತಕ್ಕಂತೆ ಅನುಷ್ಟಾನಗೊಳಿಸಲು ಸೂಚಿಸಲಾಗಿರುತ್ತದೆ. ಅದರಂತೆ ನಿಗಮದ ಎಲ್ಲಾ ಸಕ್ಷಮ ಪ್ರಾಧಿಕಾರಿಗಳಿಗೆ ಅಂದಾಜು ಪಟ್ಟಿಯನ್ನು ಪುನರ್ ಪರಿಶೀಲಿಸಿ ಪರಿಷ್ಕೃತ ಅಂದಾಜುಪಟ್ಟಿಗಳನ್ನು ದಿನಾಂಕ :15.12.2023ರೊಳಗೆ ಸಲ್ಲಿಸಲು ಸೂಚಿಸಲಾಗಿದೆ. |
| (ಆ) | ಟೆಂಡರ್ ಕರೆದು ಕಾರ್ಯಾದೇಶ ನೀಡಿರುವ ಕಾಮಗಾರಿಗಳನ್ನು ಇಂತಿಷ್ಟು ದಿನಗಳಲ್ಲಿ ಪೂರ್ಣಗೊಳಿಸಬೇಕೆಂಬ ನಿಯಮವಿಲ್ಲವೆ , ಹಾಗಿದ್ದಲ್ಲಿ, ಎಷ್ಟು ದಿನಗಳಲ್ಲಿ ಪೂರ್ಣಗೊಳಿಸಬೇಕಾಗಿದೆ ; | ಟೆಂಡರ್ ಕರೆದು ಈ ಕಛೇರಿಯಿಂದ ವಿಸ್ತೃತ ಕಾರ್ಯ ಪ್ರೇಷಣೆಗಳನ್ನು ನೀಡಲಾಗಿದ್ದು, ಅವಧಿಯು ಕಾರ್ಯಪ್ರೇಷಣೆ ನೀಡಿದ ದಿನಾಂಕದಿಂದ ಎರಡು ವರ್ಷಗಳಿರುತ್ತದೆ. ಬಿಡ್ ನಿಯಮಾನುಸಾರ ಕಾರ್ಯಪ್ರೇಷಣೆಯ ಅವಧಿಯು ಪೂರ್ಣಗೊಂಡ ನಂತರ, ಅಗತ್ಯವಿದ್ದಲ್ಲಿ ಪರಸ್ಪರ ಸಮ್ಮತಿಯ ಮೇರೆಗೆ ಮುಂದಿನ ಒಂದು ವರ್ಷದವರೆಗೆ ಅವಧಿಯನ್ನು ವಿಸ್ತರಿಸಬಹುದಾಗಿರುತ್ತದೆ. |
| (ಇ) | ಎಷ್ಟು ಕಾಮಗಾರಿಗಳು ಇರುತ್ತವೆ; ಇದರ ಒಟ್ಟಾರೆ ಮೊತ್ತವೆಷ್ಟು; | ಚಾವಿಸನಿನಿ ವ್ಯಾಪ್ತಿಯಲ್ಲಿ ದಿನಾಂಕ 22.09.2023 ರ ಅಂತ್ಯಕ್ಕೆ ನೊಂದಣಿಗೊಂಡು ವಿದ್ಯುತ್ ಮೂಲಸೌಕರ್ಯ ರಚನೆಗೆ ಬಾಕಿ ಇರುವ ಕಾಮಗಾರಿಳ ಸಂಖ್ಯೆ 23665. ಸರ್ಕಾರಿ ಆದೇಶ ಸಂಖ್ಯೆ: ಎನರ್ಜಿ/ ವಿಎಸ್ ಸಿ/214/2023, ಬೆಂಗಳೂರು, ದಿನಾಂಕ: 07.10.2023 ರ ಅನ್ವಯ, ವಿದ್ಯುತ್ ಸರಬರಾಜು ಕಂಪನಿಗಳು ಸಕ್ರಮಗೊಳಿಸಿದ ಕೃಷಿ ಪಂಪ್ ಸೆಟ್ ಗಳಿಗೆ 2022-23 ಮತ್ತು 2023-24 ರಲ್ಲಿ ಟೆಂಡರ್ ಮೂಲಕ ಮೂಲ ಸೌಕರ್ಯಗಳನ್ನು ಕಲ್ಪಿಸುವ ಸಲುವಾಗಿ ಟೆಂಡರ್ ಕರೆಯಲಾದ ಅಂದಾಜು ಪಟ್ಟಿಯನ್ನು ಪುನರ್ ಪರಿಶೀಲಿಸಲು ಸೂಚಿಸಲಾಗಿದ್ದು ಅದರಂತೆ ನಿಗಮದ ಎಲ್ಲಾ ಸಕ್ಷಮ ಪ್ರಾಧಿಕಾರಿಗಳಿಗೆ ಅಂದಾಜು ಪಟ್ಟಿಯನ್ನು ಪುನರ್ ಪರಿಶೀಲಿಸಿ ಪರಿಷ್ಕೃತ ಪ್ರಸ್ತಾವನೆಯನ್ನು ಪಡೆಯಲು ಕ್ರಮಕೈಗೊಳ್ಳಲಾಗಿದೆ. |

<table>
<tr><td></td><td></td><td>ಕಾಮಗಾರಿಗಳ ಸಂಖ್ಯೆ ಮತ್ತು ಟೆಂಡರ್ ಮೊತ್ತದ ವಿವರ ಈ ಕೆಳಕಂಡಂತಿದೆ.
<table>
<tr><td>ಕಾಮಗಾರಿಗಳ ಸಂಖ್ಯೆ</td><td>ಕಾಮಗಾರಿಗಳ ಟೆಂಡರ್ ಮೊತ್ತ<br>(ರೂ ಕೋಟಿಗಳಲ್ಲಿ)</td></tr>
<tr><td>23665</td><td>360.58</td></tr>
</table>
ಸೂಚನೆ : 2020-21ನೇ ಸಾಲಿನ ಟೆಂಡರ್ ನಲ್ಲಿ ಉಳಿಕೆಯಾದ ಮೊತ್ತ ರೂ. 125.38 ಕೋಟಿ ಹಾಗೂ 2022-23 ನೇ ಸಾಲಿನಲ್ಲಿ ಟೆಂಡರ್ ಮೊತ್ತ ರೂ. 235.20 ಕೋಟಿ</td></tr>
<tr><td>(ಈ)</td><td>ಆರ್ಥಿಕ ವರ್ಷದಲ್ಲಿ ಸದರಿ ಕಾಮಗಾರಿಗಳನ್ನು ಮುಗಿಸಲು ಬಡ್ಜೆಟ್ ಅನುದಾನವನ್ನು ಮೊದಲೆ ನಿಗದಿಪಡಿಸಿಲ್ಲವೇ; ಕೆ.ಇ.ಆರ್.ಸಿ ವತಿಯಿಂದ ಸದರಿ ಬಡ್ಜೆಟ್ ಅನುಮೋದನೆಯಾಗಿಲ್ಲವೇ;</td><td>ಚಾವಿಸನಿನಿಗೆ 2023-24 ನೇ ಸಾಲಿನ ಬಂಡವಾಳ ಕಾಮಗಾರಿಗಳಡಿ ರೈತರ ನೀರಾವರಿ ಪಂಪ್ ಸೆಟ್‌ಗಳಿಗೆ ವಿದ್ಯುತ್ ಮೂಲಭೂತ ಸೌಕರ್ಯ ಕಲ್ಪಿಸುವ ಕಾಮಗಾರಿಗಳಿಗೆ ನಿಗದಿ ಪಡಿಸಲಾಗಿದ್ದ ಬಡ್ಜೆಟ್‌ಗೆ ಮಾನ್ಯ ಕೆ.ಇ.ಆರ್.ಸಿ. ವತಿಯಿಂದ ಅನುಮೋದನೆಯಾಗಿರುತ್ತದೆ.</td></tr>
<tr><td>(ಉ)</td><td>ನಿಗದಿ ಪಡಿಸಿದ್ದಲ್ಲಿ ಬಡ್ಜೆಟ್ ಅನುದಾನ ನೀಡದಿರುವವರ ಮೇಲೆ ಕ್ರಮ ಜಗುಗಿಸಲು ಕೈಗೊಂಡಿರುವ ಕ್ರಮಗಳೇನು?</td><td>ಸರ್ಕಾರಿ ಆದೇಶ ಸಂಖ್ಯೆ: ಎನರ್ಜಿ/ವಿಎಸ್‌ಸಿ/214/2023, ಬೆಂಗಳೂರು, ದಿನಾಂಕ: 07.10.2023 ರನ್ವಯ, ವಿದ್ಯುತ್ ಸರಬರಾಜು ಕಂಪನಿಗಳು ಸಕ್ರಮಗೊಳಿಸಿದ ಕೃಷಿ ಪಂಪ್‌ಸೆಟ್‌ಗಳಿಗೆ 2022-23 ಮತ್ತು 2023-24 ರಲ್ಲಿ ಟೆಂಡರ್ ಮೂಲಕ ಮೂಲ ಸೌಕರ್ಯಗಳನ್ನು ಕಲ್ಪಿಸುವ ಸಲುವಾಗಿ ಟೆಂಡರ್ ಕರೆಯಲಾದ ಅಂದಾಜು ಪಟ್ಟಿಯನ್ನು ಪುನರ್ ಪರಿಶೀಲಿಸಲು ಸೂಚಿಸಲಾಗಿದ್ದು, ಪರಿಷ್ಕೃತ ಪ್ರಸ್ತಾವನೆಯ ಅನುಸಾರ ಬಡ್ಜೆಟ್ ಹಂಚಿಕೆ ಬಗ್ಗೆ ಸೂಕ್ತ ಕ್ರಮಕೈಗೊಳ್ಳಲಾಗುವುದು.</td></tr>
</table>

ಸಂಖ್ಯೆ: ಎನರ್ಜಿ 305 ಇಬಿಎಸ್ 2023

(ಕೆ.ಜೆ.ಜಾರ್ಜ್) 7/12/23
ಇಂಧನ ಸಚಿವರು